ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
**E-mail ID:** icps.kar@gmail.com **Ph.No.080-22879381/82**

ಸಂ:ಐಸಿಪಿಎಸ್/ಕಟ್ಟಡ-10/2020-21 ದಿನಾಂಕ:23-09-2020

## ಸುತ್ತೋಲೆ

ವಿಷಯ: ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಬರುವ ಎಲ್ಲಾ ಕಟ್ಟಡ ನಿರ್ಮಾಣ/ದುರಸ್ಥಿ/ಅಭಿವೃದ್ಧಿ/ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2018, ಬೆಂಗಳೂರು, ದಿನಾಂಕ:14.05.2018.

2. ಜಿಲ್ಲೆಗಳಿಂದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಕಟ್ಟಡ ನಿರ್ಮಾಣ/ಅಭಿವೃದ್ಧಿ/ದುರಸ್ಥಿ/ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಸಲ್ಲಿಸುತ್ತಿರುವ ಪ್ರಸ್ತಾವನೆಗಳ ಅನ್ವಯದಂತೆ.

-----

ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿಗಳ ಹಾಗೂ ಮಕ್ಕಳ ಸ್ನೇಹಿ ನ್ಯಾಯಾಲಯ ಇತ್ಯಾದಿ ಕಟ್ಟಡ ನಿರ್ಮಾಣ/ದುರಸ್ಥಿ/ಅಭಿವೃದ್ಧಿ/ನವೀಕರಣ ಕಾಮಗಾರಿ ಕೈಗೊಳ್ಳಲು ಅಂದಾಜು ಪಟ್ಟಿ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆಗೆ ಮಂಜೂರಾತಿ ಕೋರಿ, ಜಿಲ್ಲಾ ಕಛೇರಿಯ ಮೂಲಕ ಪ್ರಸ್ತಾವನೆಗಳನ್ನು ಪ್ರಧಾನ ಕಛೇರಿಗೆ ಸಲ್ಲಿಸುತ್ತಿರುವುದು ಸರಿಯಷ್ಟೆ. ಈ ಕುರಿತಂತೆ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

1. ಉಲ್ಲೇಖ(1)ರ ಆರ್ಥಿಕ ಇಲಾಖೆಯ ಆದೇಶದಂತೆ "Estimate of Rs.50 lakh for one work subject to availability of grants" ಇಂತಹ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆರ್ಥಿಕ ಪ್ರತ್ಯಾಯೋಜನೆ ಮಾಡಲಾಗಿರುತ್ತದೆ. ಅದರಂತೆ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಪ್ರಧಾನ ಕಛೇರಿಗೆ ಕಳುಹಿಸುವ ಅಂದಾಜು ರೂ. 50 ಲಕ್ಷದ ಒಳಗಿನ ಕಾಮಗಾರಿಗಳ ಪ್ರಸ್ತಾವನೆಗಳಿಗೆ ಪ್ರಧಾನ ಕಛೇರಿಯಿಂದ ಪ್ರಸ್ತಾವನೆಯ ಅರ್ಹತೆಯನ್ನು ಪರಿಶೀಲಿಸಿ ಅನುದಾನವನ್ನು ಬಿಡುಗಡೆ ಮಾಡಲು ಮಾತ್ರ ಕ್ರಮ ಕೈಗೊಳ್ಳಲಾಗುವುದು. ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಂದಲೇ ಪಡೆಯಬೇಕಾಗುತ್ತದೆ.
2. ಮೇಲಿನ ಕಂಡಿಕೆಯಂತೆ ಕೇಂದ್ರ ಕಛೇರಿಯಿಂದ ಅಂದಾಜು ರೂ. 50 ಲಕ್ಷದ ಒಳಗಿನ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಾಗ ಕೆಳಕಂಡ ಷರತ್ತುಗಳನ್ನು ವಿಧಿಸತಕ್ಕದ್ದು.

   A. ಈ ಆದೇಶವು ಕೇವಲ ಅನುದಾನದ ಬಿಡುಗಡೆ ಆದೇಶ ಮಾತ್ರ ಆಗಿರುತ್ತದೆ ಹೊರತು ಪ್ರಸ್ತಾಪಿತ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶವಲ್ಲ.

B. ಆಡಳಿತಾತ್ಮಕ ಮಂಜೂರಾತಿ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾಮಗಾರಿಗಳಿಗೆ ಮಾತ್ರ ಬಳಸುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

C. ಆಡಳಿತಾತ್ಮಕ ಮಂಜೂರಾತಿ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಮಂಜೂರಾತಿ ಆದೇಶದಲ್ಲಿಯೇ ಕಾಮಗಾರಿಯ ವಿವಿಧ ಹಂತಗಳ ಭೌತಿಕ ಪ್ರಗತಿಗೆ ಕಾಲಾವಧಿಯನ್ನು ನಿಗದಿಪಡಿಸುವುದು ಹಾಗೂ ನಿಗದಿಪಡಿಸಿದ ಕಾಲಾವಧಿಯೊಳಗೆ ಕಾಮಗಾರಿಯ ಭೌತಿಕ ಪ್ರಗತಿ ಪೂರ್ಣಗೊಳ್ಳದಿದ್ದಾಗ ವಿಧಿಸಬಹುದಾದ ದಂಡದ ಮೊತ್ತವನ್ನು ಸಹಾ ಸೂಚಿಸತಕ್ಕದ್ದು.

D. ಆಡಳಿತಾತ್ಮಕ ಮಂಜೂರಾತಿ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಮಂಜೂರಾತಿ ನೀಡುವ ಮುಂಚೆ ಕೆಳಕಂಡ ಅಂಶಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು.

1) ಪ್ರಸ್ತಾಪಿತ ಜಾಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಥವಾ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಒಡೆತನಕ್ಕೆ ಒಳಪಟ್ಟಿರುವ ಬಗ್ಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಅಥವಾ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಹಸ್ತಾಂತರವಾಗಿದೆಯೇ ಎಂಬ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

2) ಕಾಮಗಾರಿ ಅವಶ್ಯಕತೆಯ ಬಗ್ಗೆ ಖಚಿತಪಡಿಸಿಕೊಳ್ಳುವುದು

3) ಕಾಮಗಾರಿಯ ಅಂದಾಜು ನಿಖರವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು

4) ಕಾಮಗಾರಿಯನ್ನು ಸಕಾಲದಲ್ಲಿ ನಿರೀಕ್ಷಿತ ಗುಣಮಟ್ಟದಲ್ಲಿ ಪೂರ್ಣಗೊಳಿಸಬಲ್ಲ ಅನುಷ್ಠಾನದ ಏಜೆನ್ಸಿಯನ್ನು ಆಯ್ಕೆ ಮಾಡಿಕೊಳ್ಳುವುದು.

5) ಕಾಮಗಾರಿಯ ವಾಸ್ತವ ಪ್ರಗತಿಯನ್ನು ಪರಿಶೀಲಿಸಿ ಅನುಷ್ಠಾನ ಏಜೆನ್ಸಿಗೆ ಯಾವ ರೀತಿಯಲ್ಲಿ ಭಾಗಶ: ಅನುದಾನವನ್ನು ಬಿಡುಗಡೆ ಮಾಡಬೇಕೆಂಬುದರ ಬಗ್ಗೆ ಆಡಳಿತಾತ್ಮಕ ಮಂಜೂರಾತಿ ಪ್ರಾಧಿಕಾರವೇ ನಿರ್ಣಯ ಕೈಗೊಳ್ಳುವುದು.

6) ಕಾಮಗಾರಿ ಪ್ರಗತಿಯಲ್ಲಿರುವಾಗ ಕಾಮಗಾರಿಯು ಸಕಾಲದಲ್ಲಿ ನಿರೀಕ್ಷಿತ ಗುಣಮಟ್ಟದಲ್ಲಿ ಪೂರ್ಣಗೊಳ್ಳುವ ಹಾಗೆ ಅವಶ್ಯಕ ಸ್ಥಳ ತನಿಖೆಗಳನ್ನು ನಿರ್ವಹಿಸುವುದು.

7) ಕಾಮಗಾರಿಯು ಪ್ರತೀ ಹಂತದಲ್ಲೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಾವಳಿ 2000 (ಕೆಟಿಪಿಪಿ) ಅನುಸಾರ ಮಾತ್ರ ಅನುಷ್ಠಾನವಾಗುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.

8) ಒಂದು ವೇಳೆ ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಕಾಯ್ದೆಯ 4 ಜಿ ಅಡಿಯಲ್ಲಿ ವಿನಾಯಿತಿ ಪಡೆದ ಅನುಷ್ಠಾನದ ಏಜೆನ್ಸಿಯಿಂದ ಕಾಮಗಾರಿಯನ್ನು ಕೈಗೆತ್ತಿಕೊಂಡಲ್ಲಿ ಆರ್ಥಿಕ ಇಲಾಖೆಯು ಸದರಿ 4ಜಿ ವಿನಾಯಿತಿ ನೀಡಿದ ಆದೇಶದಲ್ಲಿ ಉಲ್ಲೇಖಿಸಿದ ಎಲ್ಲಾ ಷರತ್ತುಗಳು ಅನುಪಾಲನೆಯಾಗಿದ ಬಗ್ಗೆ ಸಹಾ ಆಡಳಿತಾತ್ಮಕ ಮಂಜೂರಾತಿ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು ಖಚಿತಪಡಿಸಿಕೊಳ್ಳತಕ್ಕದ್ದು.

3. ಮೇಲಿನ ಷರತ್ತುಗಳನ್ನು ಅನ್ವಯವಾಗುವ ಮಟ್ಟಿಗೆ ಹಾಗೂ ಅವಶ್ಯಕ ಮಾರ್ಪಾಡುಗಳೊಂದಿಗೆ ಕೇಂದ್ರ ಕಛೇರಿಯಿಂದ ನೀಡುವ ಆಡಳಿತಾತ್ಮಕ ಅನುಮೋದನೆ ಆದೇಶಗಳಲ್ಲಿಯೂ ಸೇರಿಸತಕ್ಕದ್ದು. ಹಾಗೂ

ಸರ್ಕಾರದಿಂದ ನೀಡುವ ಆಡಳಿತಾತ್ಮಕ ಅನುಮೋದನೆ ಆದೇಶಗಳಲ್ಲಿಯೂ ಸಹ ಸೇರಿಸಲು ನಿರ್ದೇಶನಾಲಯದ ಪ್ರಸ್ತಾವನೆಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.

4. ಅಂದಾಜು ವೆಚ್ಚ ರೂ. 50 ಲಕ್ಷಕ್ಕೆ ಮೇಲ್ಪಟ್ಟ ಕಾಮಗಾರಿಗಳಿಗೆ ಕೇಂದ್ರ ಕಛೇರಿಯಿಂದ ಆಡಳಿತಾತ್ಮಕ ಅನುಮೋದನೆ ನೀಡುವಾಗ ಸದರಿ ಆಡಳಿತಾತ್ಮಕ ಅನುಮೋದನೆ ಆದೇಶದಲ್ಲಿಯೇ ಕಾಮಗಾರಿಯ ವಿವಿಧ ಹಂತಗಳ ಭೌತಿಕ ಪ್ರಗತಿಗೆ ಕಾಲಾವಧಿಯನ್ನು ನಿಗದಿಪಡಿಸುವುದು ಹಾಗೂ ನಿಗದಿಪಡಿಸಿದ ಕಾಲಾವಧಿಯೊಳಗೆ ಕಾಮಗಾರಿಯ ಆಯಾಯ ಹಂತಗಳ ಭೌತಿಕ ಪ್ರಗತಿ ಪೂರ್ಣಗೊಳ್ಳದಿದ್ದಾಗ ವಿಧಿಸಬಹುದಾದ ದಂಡದ ಮೊತ್ತವನ್ನು ಸಹಾ ಸೂಚಿಸತಕ್ಕದ್ದು. ಹಾಗೂ ಈ ರೀತಿ ನಿಗದಿಪಡಿಸಲಾದ ಕಾಮಗಾರಿಯ ವಿವಿಧ ಭೌತಿಕ ಹಂತಗಳಿಗೆ ಅನುಗುಣವಾಗಿ ಆಯಾಯ ಹಂತಗಳಲ್ಲಿ ಅನುದಾನ ಬಿಡುಗಡೆ ಮಾಡುವುದು.

ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಕೋರುವ ಪ್ರಸ್ತಾವನೆಗಳಲ್ಲಿಯೂ ಸಹ ಮೇಲಿನಂತೆ ಶಿಫಾರಸ್ಸು ಮಾಡತಕ್ಕದ್ದು.

5. ಪ್ರಸ್ತುತ ಕಂತಿನ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡ ಷರತ್ತುಗಳನ್ನು ಪೂರೈಸಬೇಕು.

   I. ಹಿಂದಿನ ಕಂತಿನ ಅನುದಾನಕ್ಕೆ ಉಪಯೋಗತಾ ಪ್ರಮಾಣ ಪತ್ರ

   II. ಕಾಮಗಾರಿ ಪ್ರಗತಿಯ ಬಗ್ಗೆ ಸ್ಥಳ ಪರಿಶೀಲನಾ ವರದಿ ಮತ್ತು ಫೋಟೋ

   III. ಹಿಂದಿನ ಕಂತಿಗೆ ಪೂರ್ಣಗೊಳ್ಳಬೇಕಾದ ಕಾಮಗಾರಿಯ ಭೌತಿಕ ಪ್ರಗತಿಯು ಆಡಳಿತಾತ್ಮಕ ಅನುಮೋದನೆ ನೀಡಿದ ಆದೇಶದಲ್ಲಿ ನಿರ್ದೇಶಿಸಲಾದ ಕಾಲಮಿತಿಯೊಳಗೆ ಪೂರ್ಣಗೊಂಡಿದೆಯೇ? ಇಲ್ಲವಾದಲ್ಲಿ ಅವಶ್ಯಕ ದಂಡವನ್ನು ಕಡಿತಗೊಳಿಸಿ ಪ್ರಸ್ತುತ ಕಂತಿನ ಅನುದಾನವನ್ನು ಬಿಡುಗಡೆ ಮಾಡುವುದು.

6. ಕಾಮಗಾರಿ ಪೂರ್ಣಗೊಂಡ ನಂತರ ಬಿಡುಗಡೆಯಾದ ಎಲ್ಲಾ ಅನುದಾನಕ್ಕೆ ಅಂತಿಮ ಉಪಯೋಗತಾ ಪ್ರಮಾಣ ಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಬಗ್ಗೆ ದೃಢೀಕರಣ ಪತ್ರವನ್ನು ಅನುಷ್ಠಾನ ಏಜೆನ್ಸಿಯಿಂದ ಪಡೆದು ಅದರ ಜೊತೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಸ್ಥಳ ಪರಿಶೀಲನಾ ವರದಿ ಹಾಗೂ ಫೋಟೋಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಕಟ್ಟಡವು ನಿರ್ಮಾಣ ಏಜೆನ್ಸಿಯಿಂದ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಹಸ್ತಾಂತರವಾಗಿರುವುದರ ಬಗ್ಗೆ ಸಹ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕೇಂದ್ರ ಕಛೇರಿಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

7. ಎಲ್ಲಾ ಕಟ್ಟಡ ಕಾಮಗಾರಿಗಳ ಪ್ರಸ್ತಾವನೆಗಳನ್ನು ಅನುಬಂಧದಲ್ಲಿರುವ ತಡೆಪಟ್ಟಿಯಲ್ಲಿ ಮಾತ್ರ ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಮಾತ್ರ ಸಲ್ಲಿಸತಕ್ಕದ್ದು.

Pal 23.09.2020

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು:**

1. ಎಲ್ಲಾ ಜಿಲ್ಲಾಧಿಕಾರಿಗಳು ಇವರಿಗೆ ಮಾಹಿತಿಗಾಗಿ.
2. ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಮಾಹಿತಿಗಾಗಿ.
3. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ಬಾಲಮಂದಿರ/ವೀಕ್ಷಣಾಲಯ ಸಂಸ್ಥೆಯ ಅಧೀಕ್ಷಕರುಗಳಿಗೆ ಮಾಹಿತಿಗಾಗಿ.

## ತಡೆಪಟ್ಟಿ

| ಕ್ರ.ಸಂ. | ಅಂಶ | |
|---|---|---|
| 1 | ಪ್ರಸ್ತಾಪಿತ ಜಾಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಥವಾ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಒಡೆತನಕ್ಕೆ ಒಳಪಟ್ಟಿರುವ ಬಗ್ಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಅಥವಾ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಹಸ್ತಾಂತರವಾಗಿದೆಯೇ ಎಂಬ ಬಗ್ಗೆ ಸಲ್ಲಿಸಲಾಗಿರುವ ದಾಖಲಾತಿಗಳ ವಿವರ | |
| 2 | ಕಾಮಗಾರಿಯ ಅವಶ್ಯಕತೆ ಬಗ್ಗೆ ಸಮರ್ಥನೆ ಹಾಗೂ ದೃಢೀಕರಣ | |
| 3 | ಅನ್ವಯವಾಗುವ ಪ್ರಕರಣಗಳಲ್ಲಿ ನೀಲಿನಕ್ಷೆ ಸಲ್ಲಿಸಲಾಗಿದೆಯೇ? | |
| 4 | ನೀಲಿನಕ್ಷೆಯನ್ನು ಬಾಲನ್ಯಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ರೂಪಿಸಲಾಗಿದೆಯೇ? | |
| 5 | ದುರಸ್ಥಿ/ಅಭಿವೃದ್ಧಿ/ನವೀಕರಣ ಕಾಮಗಾರಿಗಳ ವಿಷಯದಲ್ಲಿ ಪ್ರಸ್ತಾವನೆ ಸಲ್ಲಿಸುವಾಗ ಇರುವ ಸ್ಥಿತಿಯ ಬಗ್ಗೆ ಫೋಟೋಗಳನ್ನು ಲಗತ್ತಿಸಲಾಗಿದೆಯೇ? | |
| 6 | ಕಾಮಗಾರಿಗೆ ತಗುಲಬಹುದಾದ ಅಂದಾಜು ವೆಚ್ಚ ಅಕ್ಷರಗಳಲ್ಲಿ | |
| 7 | ಇತ್ತೀಚಿನ ಎಸ್‌ಆರ್ ಪ್ರಕಾರ ತಾಂತ್ರಿಕ ಅಂದಾಜು ಪಟ್ಟಿ ಸಲ್ಲಿಸುವುದು ಅವಶ್ಯಕವಾಗಿದ್ದು, ಲಗತ್ತಿಸಿದ ಅಂದಾಜು ಪಟ್ಟಿ ಯಾವ ವರ್ಷದ ಎಸ್‌ಆರ್ ಪ್ರಕಾರ ಮಾಡಲಾಗಿದೆ. | |
| 8 | ಅಂದಾಜು ಪಟ್ಟಿಯು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಪರಿಶೀಲನೆಗೆ ಒಳಪಟ್ಟಿದೆಯೇ?<br>ಹೌದಾದಲ್ಲಿ ಸದರಿ ಸಕ್ಷಮ ಪ್ರಾಧಿಕಾರದ ಪದನಾಮ ಮತ್ತು<br>ಸಕ್ಷಮ ಪ್ರಾಧಿಕಾರದಿಂದ ಸಹಿಯಾದ ದಿನಾಂಕ | |

| | | |
|---|---|---|
| 9 | ಅನುಷ್ಠಾನ ಏಜೆನ್ಸಿ ಪಿಡಬ್ಲ್ಯೂಡಿ ಅಲ್ಲದಿದ್ದಲ್ಲಿ ಅವರಿಗೆ ಕೆಟಿಪಿಪಿ ಕಾಯ್ದೆ ಕಲಂ 4ಜಿ ಅಡಿಯಲ್ಲಿ ವಿನಾಯಿತಿಯು ಚಾಲನೆಯಲ್ಲಿರುವ ಬಗ್ಗೆ ಅವಶ್ಯಕ ಆದೇಶ ಲಗತ್ತಿಸಲಾಗಿದೆಯೇ? | |
| 10 | ಕೆಟಿಪಿಪಿ 4ಜಿ ಅಡಿಯಲ್ಲಿ ವಿನಾಯಿತಿ ಪಡೆದ ಅನುಷ್ಠಾನ ಏಜೆನ್ಸಿ ಅಂದಾಜು ಪಟ್ಟಿಯನ್ನು ತಯಾರು ಮಾಡಿದರೆ ಅವರು 4 ಜಿ ವಿನಾಯಿತಿ ಆದೇಶದ ಷರತ್ತುಗಳನ್ನು ಅನುಪಾಲಿಸಿಯೇ ಪ್ರಸ್ತಾವನೆ/ಅಂದಾಜನ್ನು ಸಲ್ಲಿಸಿದ್ದಾರೆಯೇ? | |
| 11 | ಪ್ರಸ್ತಾಪಿತ ಕಾಮಗಾರಿಗೆ, ಕಾಮಗಾರಿಯ ಪ್ರಗತಿಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅನುವಾಗುವಂತೆ ಕಾಮಗಾರಿಯ ವಿವಿಧ ಭೌತಿಕ ಹಂತಗಳಿಗೆ ಕಾಲಾವಧಿಯನ್ನು ನಿಗದಿಪಡಿಸುವ ಬಗ್ಗೆ | ಕಾಮಗಾರಿಯ ಹಂತ / ನಿಗದಿಪಡಿಸಿದ ಕಾಲಾವಧಿ<br>1 — ತಿಂಗಳು<br>2 — ತಿಂಗಳು<br>3 — ತಿಂಗಳು<br>4 — ತಿಂಗಳು |
| 12 | ಕಾಮಗಾರಿಯ ಆಯಾ ಭೌತಿಕ ಹಂತಗಳನ್ನು ನಿಗದಿಪಡಿಸಿದ ಕಾಲಾವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ವಿಧಿಸಬಹುದಾದ ದಂಡದ ಬಗ್ಗೆ ಪ್ರಸ್ತಾವನೆ | ಬಿಡುಗಡೆಯಾಗಬೇಕಾದ ಕಂತಿನಲ್ಲಿ ಶೇ. —— ರಷ್ಟು ಮೊತ್ತವನ್ನು ದಂಡವಾಗಿ ಕಡಿತಗೊಳಿಸಬಹುದಾಗಿದೆ |

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
_______ ಜಿಲ್ಲೆ.

ಜಿಲ್ಲಾಧಿಕಾರಿಗಳು
ಹಾಗೂ
ಅಧ್ಯಕ್ಷರು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
__________ ಜಿಲ್ಲೆ.